# <u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ , ಮೈಸೂರು.</u>

## <u>SC.261/2021</u>

**P.W.-03**
**C.W.-02**

| | | |
|---|---|---|
| ಹೆಸರು | : | Mohan |
| ತಂದೆಯ ಹೆಸರು | : | Mahesha |
| ವಯಸ್ಸು | : | 13 Years |
| ಉದ್ಯೋಗ | : | 8th Class Student |
| ವಾಸಸ್ಥಳ | : | Kempaiahna Hundi, T.Narasipura |

**<u>ಸಾಕ್ಷಿ ಅಪ್ರಾಪ್ತ ವಯಸ್ಕನಾಗಿರುವುದರಿಂದ ನ್ಯಾಯಾಲಯ ಈ ಕೆಳಕಂಡ ಪ್ರಶ್ನೆಗಳನ್ನು ಸಾಕ್ಷಿಗೆ ಕೇಳಿ ಉತ್ತರ ಪಡೆದಿರುತ್ತದೆ.</u>**

1. ನೀನು ಎಲ್ಲಿಗೆ ಬಂದ್ದಿದೀಯ?

ಉತ್ತರಃ ಕೋರ್ಟಿಗೆ ಬಂದಿದ್ದೀನಿ.

2. ನಾನು ಯಾರು?

ಉತ್ತರಃ ಜಡ್ಜ್

3. ಎದುರು ಇರುವವರು ಯಾರು?

ಉತ್ತರಃ ಲಾಯರ್

**<u>(ಸಾಕ್ಷಿ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವನ್ನು ಹೊಂದಿರುತ್ತಾನೆ ಎನ್ನುವುದನ್ನು ಮನಗೊಂಡು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ವಿಚಾರಣೆ ಮಾಡಲು ಅನುಮತಿ ನೀಡಲಾಯಿತು.)</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–</u>**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಂದೆ. ಚಾಸಾ–1 ನನ್ನ ದೊಡ್ಡಪ್ಪ. ಚಾಸಾ–3 ನನ್ನ ಅಣ್ಣ, ಅಂದರೆ ದೊಡ್ಡಪ್ಪನ ಮಗ. ನಮ್ಮ ಮನೆಯ ಪಕ್ಕದಲ್ಲೇ ನಮ್ಮ ದೊಡ್ಡಪ್ಪನ ಮನೆ. ಮೃತ ಲಕ್ಷ್ಮಮ್ಮ ನನ್ನ ಅಜ್ಜಿ. ನನ್ನ ಅಜ್ಜಿ ದೊಡ್ಡಪ್ಪನ ಮನೆಯಲ್ಲಿ, ವಾಸ ಮಾಡುತ್ತಿದ್ದರು. ನನ್ನ ಅಜ್ಜಿ ಈಗ ಮೃತ ಪಟ್ಟಿರುತ್ತಾರೆ.

**SC.No.261/2021**
**P.W.-02**
**C.W.-03**

2. ದಿಃ29.07.2021 ರಂದು ನನ್ನ ಅಜ್ಜಿ ಮೃತ ಪಟ್ಟರು. ಆ ದಿನ ಸಂಜೆ 6.00 ಗಂಟೆಯ ಸಮಯದಕ್ಕೆ ಚಾಸಾ-3 ನನ್ನ ಅಣ್ಣ ಯಶವಂತ ನನ್ನ ದೊಡ್ಡಪ್ಪನ ಬೈಕನ್ನು ಅವರ ಮನೆಯ ಎದುರು ತೊಳೆಯುತ್ತಿದ್ದ. ಆಗ ನನ್ನ ಅಪ್ಪ ನನ್ನ ಸ್ಕೂಟರನ್ನು ತೊಳೆಯದೇ, ನಿನ್ನ ಅಪ್ಪನ ಸ್ಕೂಟರನ್ನು ತೊಳೆಯುತ್ತಿದ್ದೀಯಾ ಎಂದು ಕೈಯಲ್ಲಿ ಹೊಡೆದ. ಆಗ ನನ್ನ ಅಜ್ಜಿ, ಅವ್ವ ಇಲ್ಲದಿರುವ ಮಕ್ಕಳಿಗೆ ಏಕೆ ಹೊಡೆಯುತ್ತಿದ್ದೀಯಾ ಎಂದು ಬಂದರು. ಅಜ್ಜಿ ನನ್ನ ಅಪ್ಪನಿಗೆ ಹೊಡೆಯುತ್ತೇನೆ ಎಂದು ದೊಣ್ಣೆ ಹಿಡಿದುಕೊಂಡು ಬಂದರು. ಆಗ ನನ್ನ ಅಪ್ಪ ಆ ದೊಣ್ಣೆಯನ್ನು ಆಕೆಯ ಕೈನಿಂದ ಕಿತ್ತು ಕೊಂಡು ನನ್ನ ಅಜ್ಜಿಯ ಕಪಾಳಕ್ಕೆ ಅದರಲ್ಲಿ ಹೊಡೆದರು. ಆಗ ಅಲ್ಲಿ ಅಜ್ಜಿ ಕೆಳಗೆ ಬಿದ್ದು ಹೋದರು. ಆಗ ನಾವೆಲ್ಲಾ ಅಳುತ್ತಿದ್ದೆವು. ಅಕ್ಕಪಕ್ಕದವರೆಲ್ಲಾ ಬಂದರು. ಆಗ ನಮ್ಮ ತಾಯಿ ಬಂದರು. ನಮ್ಮ ತಾಯಿ ಅಜ್ಜಿಯನ್ನು ತೊಡೆಯ ಮೇಲೆ ಮಲಗಿಸಿಕೊಂಡು ನೀರು ಕುಡಿಸಿದರು. ಆಗ ಅಜ್ಜಿ ತೀರಿಕೊಂಡರು. ಮರು ದಿನ ಪೊಲೀಸರು ಬಂದರು. ನಾನು ಮಾತನಾಡಿದ್ದನ್ನು ಅವರು ವಿಡಿಯೋ ಮಾಡಿಕೊಂಡರು. ಅಜ್ಜಿ ಹೇಗೆ ಸತ್ತರು ಎನ್ನುವುದನ್ನು ನಾನು ಅವರಿಗೆ ಹೇಳಿದೆ. ಅದನ್ನು ಅವರು ವಿಡಿಯೋ ಮಾಡಿಕೊಂಡರು. ಒಂದು ವಾರದ ನಂತರ ನನ್ನನ್ನು ಟಿ.ನರಸೀಪುರದ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಜಡ್ಜ್ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಮುಂದಿನ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.